**MAY 16, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **'ಆಕಾಶವಾಣಿ 90; ಸಂಧ್ಯಾ ಸುಧೆ'**; ಶ್ರಾವ್ಯ ಮಾಧ್ಯಮದಿಂದ, ನಮ್ಮ ಕಲ್ಪನೆ ಹಾಗೂ ಆಲೋಚನೆ, ಹೃದಯಸ್ಪರ್ಶಿ – ಡಾಕ್ಟರ್ ಆರ್. ಕೃ ್ಣಪ್ರಸಾದ.
- **ತುಮಕೂರು ವಿಶ್ವವಿದ್ಯಾನಿಲಯದಲ್ಲಿ,** ಇಂದು ಜಯಮಂಗಲಿ ನದಿ, ಪುನಃಶ್ಚೇತನ ಕಾರ್ಯಾಗಾರ.
- **ಮೈಸೂರಿನ ನಂಜರಾಜ ಬಹದ್ದೂರ ಛತ್ರದಲ್ಲಿ, ಇಂದು,** ಮಾವು ಮತ್ತು ಹಲಸಿನ ಹಬ್ಬ.
- **ಸಾಗರ ಮಾಲಾ ಯೋಜನೆ;** ಬಾಗಲಕೋಟೆ ಜಿಲ್ಲೆ, ಹೆರಕಲ್ ದಿಂದ, ಆಲಮಟ್ಟಿ ವರೆಗೆ, ಶೀಘ್ರ ಜಲ ಸಾಹಸ ಪ್ರವಾಸೋದ್ಯಮ.

<><><>

**ಈಗ ವಾರ್ತೆಗಳ ವಿವರ**

<><><>

**ಆಕಾಶವಾಣಿ, ಕಳೆದ 90 ವರ್ಷಗಳಲ್ಲಿ,** ಕೇಳಿಸಿಕೊಳ್ಳುವ ವಿವೇಕ ಸಂಸ್ಕೃತಿ ಹಾಗೂ ಕೇಳುಗರ ದೊಡ್ಡ ಪರಂಪರೆಯನ್ನು ಬೆಳೆಸಿದೆ; ನಮ್ಮ ಕಲ್ಪನೆ ಹಾಗೂಆಲೋಚನೆಯನ್ನು, ಶ್ರಾವ್ಯ ಮಾಧ್ಯಮ, ಹೃದಯಸ್ಪರ್ಶಿಯಾಗಿಸುತ್ತದೆ ಎಂದು, ಡಾಕ್ಟರ್ ಎಂ.ಎಂ. ಜೋಶಿ ನೇತ್ರ ವಿಜ್ಞಾನ ಸಂಸ್ಥೆ ನಿರ್ದೇಶಕ, ಡಾಕ್ಟರ್ ಆರ್. ಕೃ ್ಣಪ್ರಸಾದ, ತಿಳಿಸಿದ್ದಾರೆ. ಆಕಾಶವಾಣಿ ಧಾರವಾಡ ಕೇಂದ್ರ, ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ, 'ಆಕಾಶವಾಣಿ 90; ಸಂಧ್ಯಾ ಸುಧೆ' ಉದ್ಘಾಟಿಸಿ, ಮಾತನಾಡಿದರು.

<><><>

**ಆಕಾಶವಾಣಿಯ ಎ ಶ್ರೇಣಿ,** ಶಾಸ್ತ್ರೀಯ ಸಂಗೀತ ಗಾಯಕ ರಘುನಂದನ ಭಟ್ ಗಾಯನ ಹಾಗೂ ಬಿ ಹೈ ಶ್ರೇಣಿ ಬಾನ್ಸುರಿ ಕಲಾವಿದೆ, ಕೃತಿಕಾ ಜಂಗಿನಮಠ, ಕೊಳಲು ವಾದನ ಪ್ರಸ್ತುತ ಪಡಿಸಿದರು.

**ಆಕಾಶವಾಣಿ ಧಾರವಾಡ ಕೇಂದ್ರದ,** ತಾಂತ್ರಿಕ ವಿಭಾಗದ, ಉಪ ಮಹಾನಿರ್ದೇಶಕ ಅರುಣ ಪ್ರಭಾಕರ ಹಾಗೂ ಕಾರ್ಯಕ್ರಮ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ ಸೇರಿದಂತೆ, ಗಣ್ಯರು, ವಿಶೇಷ ಆಹ್ವಾನಿತರು ಪಾಲ್ಗೊಂಡಿದ್ದರು.

<><><>

**ತುಮಕೂರು ವಿಶ್ವವಿದ್ಯಾನಿಲಯದ,** ಪ್ರೊಫೆಸರ್ ಎಂ.ಡಿ.ನಂಜುಂಡಸ್ವಾಮಿ, ಅಧ್ಯಯನ ಪೀಠ ಮತ್ತು ಸಮಾಜಕಾರ್ಯ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ವಿವಿಧ ಸಂಸ್ಥೆಗಳ ಸಹಯೋಗದಲ್ಲಿ, ಇಂದು ಜಯಮಂಗಲಿ ನದಿ, ಪುನಃಶ್ಚೇತನ ಕಾರ್ಯಾಗಾರ ಆಯೋಜಿಸಿದೆ. 110 ಕಿಲೋ ಮೀಟರ್ ಉದ್ದ ಹರಿಯುವ, ಜಯಮಂಗಲಿ ನದಿ ತಟದಲ್ಲಿ, ಮಧುಗಿರಿ ತಾಲೂಕಿನ ಮೈದನಹಳ್ಳಿಯಲ್ಲಿ, ಪ್ರಸಿದ್ಧ ಜಯಮಂಗಲಿ ಕೃಷ್ಣಮೃಗ ಸಂರಕ್ಷಣಾ ಮೀಸಲು ಅರಣ್ಯ ಪ್ರದೇಶವಿದ್ದು, ಸಮೃದ್ಧ 798 ಎಕರೆ ಹುಲ್ಲುಗಾವಲಿದೆ. ಜಯಮಂಗಲಿ ನದಿ ಪುನಃಶ್ಚೇತನ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ತುಮಕೂರಿನ ಜಲಸಂರಕ್ಷಣೆ ಕಾರ್ಯಕರ್ತ, ಮಲ್ಲಿಕಾರ್ಜುನ ಹೊಸಪಾಳ್ಯ.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆ ಬಳಿಯ,** ರಾಷ್ಟ್ರೀಯ ಹೆದ್ದಾರಿ 50ರಲ್ಲಿ, ತುಂಗಭದ್ರಾ ಜಲಾಶಯದ ಸೇತುವೆ ಮೇಲಿಂದ, ಟ್ರ್ಯಾಕ್ಟರ್ ಮಗುಚಿದ ಪರಿಣಾಮ, ಪ್ರಯಾಣಿಸುತ್ತಿದ್ದ 19 ಜನರ ಪೈಕಿ, 7 ಜನ ಮೃತಪಟ್ಟು, 12 ಜನ ಗಾಯಗೊಂಡಿದ್ದಾರೆ. ಸಂಡೂರು ಮತ್ತು ಕೂಡ್ಲಿಗಿಯ 12 ಜನರನ್ನು, ಹೊಸಪೇಟೆ ಮತ್ತು ಕೊಪ್ಪಳದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಬಳ್ಳಾರಿಯ ಸಂಸದ, ಈ. ತುಕಾರಾಂ, ಗಾಯಾಳುಗಳ ಚಿಕಿತ್ಸಾ ವೆಚ್ಚನ್ನು, ಸಂಸದರ ನಿಧಿಯಿಂದ ಭರಿಸುವುದಾಗಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತಪಟ್ಟವರ ಕುಟುಂಬಗಳಿಗೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

<><><>

**ವಿಜಯಪುರ ಜಿಲ್ಲೆ, ಆಲಮೇಲ ತಾಲೂಕು,** ಮೊರಟಗಿ ಗ್ರಾಮದಲ್ಲಿ, ಮನೆಯ ಮೇಲ್ಛಾವಣಿ ಕುಸಿದು, ನಾಲ್ಕು ಜನ ಸಾವಿಗೀಡಾದ ಹಿನ್ನೆಲೆ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಸ್ಥಳಕ್ಕೆ ತೆರಳಿ, ಪರಿಶೀಲಿಸಿದರು. ಮೃತರ ಕುಟುಂಬದವರಿಗೆ ಸಾಂತ್ವನ ತಿಳಿಸಿ, ಬಾಲಕ ವೀರೇಶ ಬಡಿಗೇರಗೆ, 20 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು. ವಿದ್ಯಾಭ್ಯಾಸಕ್ಕೆ ನೆರವು ಒದಗಿಸಲಾಗುವುದು ಎಂದು, ಸಚಿವರು ತಿಳಿಸಿದರು.

<><><>

**ಇಂದು, ಮೈಸೂರಿನ, ನಂಜರಾಜ ಬಹದ್ದೂರ ಛತ್ರದಲ್ಲಿ,** ಮಾವು ಮತ್ತು ಹಲಸಿನ ಹಬ್ಬವನ್ನು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ಕಿಸಾನ್ ಮಾಲ್ ಹಾಗೂ ಸಹಜ ಸಮೃದ್ಧ ಆಯೋಜಿಸಿವೆ. ಬೆಂಗಳೂರಿನ, ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ, ಕಪೆಕ್ ವ್ಯವಸ್ಥಾಪಕ ನಿರ್ದೇಶಕ, ಸಿ.ಎನ್.ಶಿವಪ್ರಕಾಶ, ಮಾವು-ಹಲಸಿನ ಹಬ್ಬವನ್ನು, ಬೆಳಗ್ಗೆ 11.30ಕ್ಕೆ ಉದ್ಘಾಟಿಸಲಿದ್ದಾರೆ. ದೇಸಿ ಮಾವು ತಳಿ ಸಂರಕ್ಷಕ, ಕಿರುಗಾವಲು ಸೈಯ್ಯದ್ ಘನಿಖಾನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಹಲಸು ಮೇಳದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದಾವಣಗೆರೆ ಜಿಲ್ಲೆ, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ, ಡಾಕ್ಟರ್ ಟಿ.ಎನ್.ದೇವರಾಜ.

<><><>

**ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಹಾಗೂ ಅರಣ್ಯ ಇಲಾಖೆ** ವತಿಯಿಂದ, ನಾಳೆ ಮತ್ತು ನಾಡಿದ್ದು, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಕದ್ರಿ ಉದ್ಯಾನದಲ್ಲಿ, ರಾಜ್ಯ ಮಟ್ಟದ ಗೇರು ಮೇಳ ಮತ್ತು ಗೇರು ಕೃಷಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು, ನಿಗಮದ ಅಧ್ಯಕ್ಷೆ, ಡಿ.ಎಸ್. ಮಮತಾ ಗಟ್ಟಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ನಾಳೆ ಬೆಳಗ್ಗೆ 11 ಗಂಟೆಗೆ, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ಗೇರು ಮೇಳವನ್ನು ಉದ್ಘಾಟಿಸಲಿದ್ದು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಜಿಲ್ಲಾ ಉಸ್ತುವಾರಿ ಸಚಿವ,

ದಿನೇಶ ಗುಂಡೂರಾವ, ಸಂಸದ ಬ್ರಿಜೇಶ್ ಚೌಟ, ಪಾಲ್ಗೊಳ್ಳಲಿದ್ದಾರೆ ಎಂದರು. 70ಕ್ಕೂ ಅಧಿಕ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ತಜ್ಞರಿಂದ ಗೋಡಂಬಿ ಕೃಷಿಯ ಬಗ್ಗೆ ತಾಂತ್ರಿಕ ಕಾರ್ಯಾಗಾರ ನಡೆಯಲಿದೆ.

<><><>

**ಸಾಗರ ಮಾಲಾ ಯೋಜನೆಯಡಿ,** ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕು ಹೆರಕಲ್ ದಿಂದ, ಆಲಮಟ್ಟಿ ವರೆಗೆ, ಕೃಷ್ಣ ಹಿನ್ನೀರಿನಲ್ಲಿ, ಜಲ ಸಾಹಸ ಕ್ರೀಡೆ ಅಭಿವೃದ್ಧಿಗೆ, ಯೋಜಿಸಲಾಗಿದೆ ಎಂದು, ಬೀಳಗಿ ಶಾಸಕ ಜೆ.ಟಿ. ಪಾಟೀಲ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿದ ಅವರು, 12 ಕೋಟಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ, ರಿವರ್ ಕ್ರೂಸ್ ಪ್ರವಾಸೋದ್ಯಮ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು. ಚಿಕ್ಕಸಂಗಮಕ್ಕೆ ಆಗಮಿಸುವ, 84 ಪ್ರಜಾತಿಯ ವಲಸೆ ಪಕ್ಷಿಗಳಿಗೆ ಅನುಕೂಲ ಕಲ್ಪಿಸಲು, 50 ಸಾವಿರ ಸಸಿಗಳನ್ನು ನೆಡಲು, ಅರಣ್ಯ ಇಲಾಖೆ ಯೋಜಿಸಿದೆ ಎಂದರು.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಸೀಮಾ ಸುಂಕ ಕಸ್ಟಮ್ಸ್ ಅಧಿಕಾರಿಗಳು, ವನ್ಯಜೀವಿಗಳ ಕಳ್ಳ ಸಾಗಣೆ ಪತ್ತೆ ಹಚ್ಚಿದ್ದಾರೆ. ರೆಡ್–ಫುಟೆಡ್ ಹಾಗೂ ಆಫ್ರಿಕನ್ ಸ್ಪರ್ ಆಮೆಗಳು ಸೇರಿದಂತೆ, ಅಪರೂಪದ 47 ವನ್ಯಜೀವಿಗಳನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿದ್ದಾರೆ.

<><><>

**ದಕ್ಷಿಣಕನ್ನಡ ಜಿಲ್ಲೆಯಲ್ಲಿ,** ಎಂಡೋಸಲ್ಫಾನ್ ಸಂತ್ರಸ್ತರಿಗೆ, ಆರೋಗ್ಯ ತಪಾಸಣಾ ಶಿಬಿರಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದಿನಿಂದ ಏರ್ಪಡಿಸಿದೆ. ಇಂದು, ಪುತ್ತೂರು ತಾಲೂಕು ಪಾಣಾಜೆ ಹಾಗೂ 19 ರಂದು, ಬೆಳ್ತಂಗಡಿ ತಾಲೂಕು ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಸುಳ್ಯ ತಾಲೂಕಿನ ಬೆಳ್ಳಾರೆ ಹಾಗೂ 20 ರಂದು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಆರೋಗ್ಯ ಕೇಂದ್ರಗಳಲ್ಲಿ, ತಪಾಸಣಾ ಶಿಬಿರ ನಡೆಯಲಿದೆ.

<><><>

**ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನಲ್ಲಿ,** ಕಾಡುಕೋಣಗಳ ಸೆರೆ ಕಾರ್ಯಾಚರಣೆ, ಅರಣ್ಯಾಧಿಕಾರಿ ಕುಮಾರ ಪು ್ಕರ್ ನೇತೃತ್ವದಲ್ಲಿ, ಆರಂಭವಾಗಿದೆ.

<><><>

**ಪರಿ ್ಕೃತ ಘನತ್ಯಾಜ್ಯ ನಿರ್ವಹಣಾ ನಿಯಮ–**2026 ಜಾರಿಗೊಂಡಿದ್ದು, ಪ್ರತಿಯೊಬ್ಬರೂ, ಕಸವನ್ನು 4 ಹಂತಗಳಲ್ಲಿ ಬೇರ್ಪಡಿಸುವುದು ಕಡ್ಡಾಯವಾಗಿದೆ ಎಂದು, ಶಿವಮೊಗ್ಗ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಆಕಾಶವಾಣಿ 90: ಸಂಧ್ಯಾ ಸುಧೆ’:** ಶ್ರಾವ್ಯ ಮಾಧ್ಯಮದಿಂದ, ನಮ್ಮ ಕಲ್ಪನೆ ಹಾಗೂ ಆಲೋಚನೆ, ಹೃದಯಸ್ಪರ್ಶಿ – ಡಾಕ್ಟರ್ ಆರ್. ಕೃ ್ಣಪ್ರಸಾದ.
- **ತುಮಕೂರು ವಿಶ್ವವಿದ್ಯಾನಿಲಯದಲ್ಲಿ,** ಇಂದು ಜಯಮಂಗಲಿ ನದಿ, ಪುನಃಶ್ಚೇತನ ಕಾರ್ಯಾಗಾರ.
- **ಮೈಸೂರಿನ ನಂಜರಾಜ ಬಹದ್ದೂರ ಛತ್ರದಲ್ಲಿ, ಇಂದು,** ಮಾವು ಮತ್ತು ಹಲಸಿನ ಹಬ್ಬ.
- **ಸಾಗರ ಮಾಲಾ ಯೋಜನೆ:** ಬಾಗಲಕೋಟೆ ಜಿಲ್ಲೆ, ಹೆರಕಲ್ ದಿಂದ, ಆಲಮಟ್ಟಿ ವರೆಗೆ, ಶೀಘ್ರ ಜಲ ಸಾಹಸ ಪ್ರವಾಸೋದ್ಯಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>